ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

DR. MANMOHAN SINGH
BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

ಕುಲಸಚಿವರ (ಆಡಳಿತ) ಕಚೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001
ದೂ.ಸಂ.: 080-22961016/22131385 ಇ-ಮೇಲ್ ಐಡಿ: registrar@bcu.ac.in / registrarbcu@gmail.com

**ಸಂ:** ಡಾ.ಮಸಿಂಬೆಂನವಿ/ಶೈಕ್ಷಣಿಕ/ಸ್ನಾತಕ ಪ್ರವೇಶಾತಿ/2026-27 **ದಿನಾಂಕ:** 17.06.2026

# ಅಧಿಸೂಚನೆ

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2024, ಬೆಂ, ದಿ: 07.11.2025
2. ಈ ಕಚೇರಿಯ ಅಧಿಸೂಚನೆ ಸಂ: Dr.MSBCU/ACA/UG Calendar of Events/2026-27 ದಿನಾಂಕ: 07.04.2026
3. ಈ ಕಚೇರಿಯ ಸುತ್ತೋಲೆ ಸಂ: ಡಾ.ಮಸಿಂಬೆಂನವಿ/ಶೈಕ್ಷಣಿಕ/ಸ್ನಾತಕ ಪ್ರವೇಶಾತಿ/ 2026-27, ದಿನಾಂಕ: 05.06.2026
4. BCU Principals' Association Letter No: BCUPA/025/2026-27, Date: 16.06.2026
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.06.2026

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸ್‌ಗಳ ಪ್ರವೇಶಾತಿಯನ್ನು ಉಲ್ಲೇಖ (2) ರ ಶೈಕ್ಷಣಿಕ ವೇಳಾಪಟ್ಟಿಯನ್ವಯ ದಿನಾಂಕ 08.04.2026 ರಿಂದ 08.05.2026 ರವರೆಗೆ ದಂಡ ಶುಲ್ಕ ರಹಿತವಾಗಿ ಹಾಗೂ ದಿನಾಂಕ 25.05.2026 ರವರೆಗೆ ದಂಡ ಶುಲ್ಕದೊಂದಿಗೆ ನಡೆಸಲು ನಿಗದಿಪಡಿಸಲಾಗಿತ್ತು.

ಹಾಗೆಯೇ, UUCMS ಪೋರ್ಟಲ್‌ನಲ್ಲಿ ಉಂಟಾದ ವಿವಿಧ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಹಾಗೂ ಉಲ್ಲೇಖ (3) ರಂತೆ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರ ಒಕ್ಕೂಟ ಮತ್ತು ಇತರ ಸಂಯೋಜಿತ ಕಾಲೇಜುಗಳು ಪ್ರವೇಶಾತಿ ಕೊನೆಯ ದಿನಾಂಕ ವಿಸ್ತರಿಸಲು ಕೋರಿರುತ್ತಾರೆ.

ಈ ಮಧ್ಯೆ ಸರ್ಕಾರದ ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಏಕರೂಪ ಶೈಕ್ಷಣಿಕ ವೇಳಾಪಟ್ಟಿಯನ್ನು ಪ್ರಕಟಿಸಿರುತ್ತದೆ. ಇದನ್ನು ಸಹ ಗಮನದಲ್ಲಿಟ್ಟುಕೊಂಡು ಹಾಗೂ UUCMS ನ ತಾಂತ್ರಿಕ ಸಮಸ್ಯೆ ಮತ್ತು ಕಾಲೇಜುಗ ಳ ಮನವಿಯನ್ನು ಪರಿಗಣಿಸಿ ಉಲ್ಲೇಖ (2&3) ರ ಅಧಿಸೂಚನೆಯಲ್ಲಿನ ದಿನಾಂಕವನ್ನು ಮಾರ್ಪಡಿಸಿ **ಸ್ನಾತಕ ಕೋರ್ಸ್‌ಗಳ ಪ್ರವೇಶಾತಿ ದಿನಾಂಕವನ್ನು 30.06.2026 ರವರೆಗೆ ವಿಸ್ತರಿಸಲಾಗಿದೆ.**

ಅಲ್ಲದೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸುಗಳ ತರಗತಿಗಳನ್ನು 01.07.2026 ರಿಂದ ಪ್ರಾರಂಭಿಸಲು ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

**ಕುಲಸಚಿವರು**

**ಇವರಿಗೆ,**
1. ಪ್ರಾಂಶುಪಾಲರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳು.

**ಪ್ರತಿ,**
1. ಎಲ್ಲಾ ನಿಕಾಯಗಳ ಡೀನರುಗಳಿಗೆ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ.
2. ಸಂಬಂಧಿತ ವಿಭಾಗಗಳಿಗೆ.
3. UUCMS ನೋಡಲ್ ಅಧಿಕಾರಿ (ದಿನಾಂಕ ವಿಸ್ತರಣೆ ಮಾಡಲು)
4. ಕಛೇರಿ ಪ್ರತಿ.